ಬಂದಿರುವ ಹಾಗೆ ಮೆ|| ದಾಸಪ್ಪ ಅಂಡ್ ಕೋ-ನವರೇ ಬೆಂಗಳೂರಿನಲ್ಲಿ 10,71,61, 600-00 ರೂಪಾಯಿಗಳ ಬಾಕಿಯನ್ನು ಸರ್ಕಾರಕ್ಕೆ ಕೊಡಬೇಕಾಗಿದೆ. ಮಾನ್ಯ ಅಧ್ಯಕ್ಷರೆ ತಮ್ಮ ಮುಖೇನ ನಾನು ಸರ್ಕಾರದ ಗಮನಕ್ಕೆ ತರಬಯಸುವ ವಿಷಯವೆಂದರೆ, ಕರ್ನಾಟಕ ಎಕ್ಸ್ಸೈಸ್, ಸೆಕ್ಷನ್ 64ರ ಪ್ರಕಾರ "In the event of any default by any person, liceneed or holding lease under this Act, all his distillery, brewery or warehouse or shop or premises, fitting..... shall be liable to be attached in satisfaction of any claim for such excise revenus ಎಂದು ಇದೆ. ಈ ಒಂದು ಅಧಿಕಾರ ಸರ್ಕಾರಕ್ಕಿರುವಾಗ ಮತ್ತು ಬೆಂಗಳೂರು ನಗರ ಜಿಲ್ಲೆಯಲ್ಲಿಯೇ ಒಬ್ಬರೇ ಒಬ್ಬರು ಹತ್ತು ಕೋಟಿ ಎಪ್ಪತ್ತೊಂದು ಲಕ್ಷ ರೂಪಾಯಿಗಳ ಬಾಕಿಯನ್ನು ಉಳಿಸಿ ಕೊಂಡಿರುವಾಗ ಇವರ ಮೇಲೆ ಸರ್ಕಾರ ಏಕೆ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ? ಆ ಕಂಟ್ರಾಕ್ಟರ್‌ನಿಂದ ಈ ಬಾಕಿಯನ್ನು ವಸೂಲು ಮಾಡಲು ಸರ್ಕಾರ ಏಕೆ ಪ್ರಯತ್ನ ಪಡುತ್ತಿಲ್ಲವೆನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು.

ಶ್ರೀ ಎಸ್.ಎಂ.ಕೃಷ್ಣ : ಈ ವ್ಯವಹಾರದಲ್ಲಿ ಈ ಬೇನಾಮಿಗಳ ಭಾಧೆಯಿಂದ ಜವಾಬ್ದಾರಿಕೆಯನ್ನು ಫಿಕ್ಸ್ ಮಾಡುವುದಕ್ಕೆ ಅಗಿಂದಾಗ್ಗೆ ತೊಂದರೆಗಳು ಉದ್ಭವವಾಗುತ್ತದೆ. ಆದರೆ ಈ ಬಗ್ಗೆ ಮಾನ್ಯ ಸದಸ್ಯರು ಯಾವ ಸೆಕ್ಷನ್ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೋ ಆ ಸೆಕ್ಷನ್‌ನ್ನು ನಾವು ಉಪಯೋಗಿಸುತ್ತೇವೆ.

ರಾಜ್ಯದ ಅಲ್ಪಸಂಖ್ಯಾತರಿಗಾಗಿ ಮೈನಾರಟಿ ಕಮಿಷನ್ ನೇಮಕದ ಬಗ್ಗೆ

198 (1549) ಶ್ರೀಎ. ರಾಮದಾಸ್ (ಕೃಷ್ಣ ರಾಜ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರಿಗಾಗಿ ಕಮಿಷನ್ (ಮೈನಾರಿಟಿ ಕಮಿಷನ್) ಎಂದು ಯಾವ ಸರ್ಕಾರಿ ಆದೇಶದಂತೆ ನೇಮಿಸಲಾಗಿತ್ತು? (ಆದೇಶದ ಪ್ರತಿ ನೀಡುವುದು) ಈ ಕಮಿಷನ್ನ ಧ್ಯೆಯೋದ್ದೇಶಗಳು ಏನು? (ಪ್ರತಿ ನೀಡುವುದು)

ಆ) ಈವರೆಗೆ ಈ ಕಮಿಷನ್ನಿನ ಅಧ್ಯಕ್ಷತೆ ವಹಿಸಿದವರು ಯಾರು ಯಾರು? ಮತ್ತು ಅವರ ಕೆಲಸ ನಿರ್ವಹಿಸಿದ ಅವಧಿ ವಿವರ ನೀಡಿ.

ಇ) ಅಲ್ಪಸಂಖ್ಯಾಂತರ ಆಯೋಗಕ್ಕೆ ಕೇವಲ ಒಂದೇ ಜಾತಿಯವರು ಅಧ್ಯಕ್ಷರಾಗಿ ನೇಮಿಸಲ್ಪಡುತ್ತಿರುವುದರ ಹಿನ್ನೆಲೆ ಏನು? ಇತರೆ ಅಲ್ಪಸಂಖ್ಯಾತರ ಜನಾಂಗಕ್ಕೆ ಸೇರಿದವರನ್ನು ಕನಿಷ್ಠ 2 ವರ್ಷದ ಅವಧಿಗೊಬ್ಬರಂತೆ ನೇಮಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ)

ಅ) 1983ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ. ಡಿಪಿಎಆರ್ 1 ಎಂಎಂಆರ್ 83 ದಿನಾಂಕ9-5-1983ರಲ್ಲಿ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗ ಮೊಟ್ಟ ಮೊದಲನೆಯದಾಗಿ ರಚಿಸಲಾಗಿತ್ತು (ಪ್ರತಿ ಲಗತ್ತಿಸಲಾಗಿದೆ - ಅನುಬಂಧ-1)

1988ನೇ ಸಾಲಿನಲ್ಲಿ ಆಯೋಗ ಪುನರಚಿತಲಾಗಿತ್ತು. ಈ ಮಧ್ಯೆ ದಿನಾಂಕ 3- 10- 1994ರಿಂದ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗ ಅಧಿನಿಯಮ 1994ಜಾರಿಗೆ ಬಂದಿದೆ. ಸದರಿ ಅಧಿನಿಯಮದಲ್ಲಿ ನಮೂದಿಸಿರುವ ಕಾರ್ಯನಿರ್ವಹಣದಂತೆ ಆಯೋಗ ಕಾರ್ಯ ನಿರ್ವಹಿಸುತ್ತಿದೆ. (ಪ್ರತಿ ಲಗತ್ತಿಸಿದೆ. ಅನುಬಂಧ-2)

ಕ್ರಮ ಸಂಖ್ಯೆ	ಅಧ್ಯಕ್ಷರ ಹೆಸರು	ಅವಧಿ	
		ಯಿಂದ	ರವರಿಗೆ
	ಶ್ರೀಯುತರುಗಳು		
1.	ಆರ್. ಹೆಚ್. ಗೊಡ್ಖಾಲ	ಮೇ 1983	ಡಿಸೆಂಬರ್ 1986
2.	ಎಫ್. ಹೆಚ್. ಮೋಹಸಿನ್	ಜುಲೈ 1988	ಫೆಬ್ರವರಿ 1990
3.	ಸಿ.ಎಂ.ಇಬ್ರಾಹಿಂ	ಸಪ್ಟೆಂಬರ್ 1990	ಅಕ್ಟೋಬರ್ 1990
4.	ಕೆ. ರೆಹಮಾನ್ ಖಾನ್	ಜನವರಿ 1993	ಜನವರಿ 1994
5.	ಸಾದತ್ ಅಲಿ ಖಾನ್	ಏಪ್ರಿಲ್ 1994	ಡಿಸೆಂಬರ್ 1994
6.	ಡಾ: ಅಬ್ದುಲ್ ಖರೀಂ	ಮಾರ್ಚ್ 1995	ಏಪ್ರಿಲ್ 1997
7.	ಪ್ರೊ. ಎಂ. ಬಷೀರ್ ಹುಸೇನ್	ಏಪ್ರಿಲ್ 1997	ಸೆಪ್ಟೆಂಬರ್ 1998
8.	ಖಮರುಲ್ ಇಸ್ಲಾಂ	ಸೆಪ್ಟೆಂಬರ್ 1998	ಜೂನ್ 1999.
9.	ಸೈಯದ್ ಸೈಫುಲ್ಲಾ	ಜುಲೈ 1999	ಅಗಸ್ಟ್ 1999
10.	ಅಜೀಜ್ ಸೇಠ್	ಜನವರಿ 2000	

ಇ) 1991ನೇ ಸಾಲಿನ ಜನಗಣತಿಯ ಆಧಾರದ ಮೇಲೆ ರಾಜ್ಯದಒಟ್ಟುಜನಸಂಖ್ಯೆಯಲ್ಲಿಅಲ್ಪ ಸಂಖ್ಯಾತರ ಪ್ರತಿನಿಧ್ಯತೆ ಈ ಕೆಳಕಂಡಂತಿದೆ.

ಒಟ್ಟು ಜನಸಂಖ್ಯೆ	**4,49,77,201**	
ಮುಸ್ಲಿಂ	52,34,923	(ಶೇ 11.64)
ಕ್ರಿಶ್ಚಿಯನ್	8,59,478	(ಶೇ 1.91)
ಜೈನ್ಸ್	3,26,114	(ಶೇ 0.73)
ಭೌದ್ಧರು	73,912	(ಶೇ 0.16)
ಸಿಖ್‌ರು	10,101	(ಶೇ 0.02)
ಇತರರು	42,446	(ಶೇ 0.09)

ಅಲ್ಪ ಸಂಖ್ಯಾತರ ಒಟ್ಟಾರೆ ಜನಸಂಖ್ಯೆಯಲ್ಲಿ ಮುಸ್ಲಿಂ ಜನಾಂಗದವರು ಶೇಂ. 80.49 ರಷ್ಟು ಪ್ರಾತಿನಿಧ್ಯತೆ ಹೊಂದಿರುತ್ತಾರೆ. ಇದುವರೆವಿಗೂ ಮುಸ್ಲಿಂ ಜನಾಂಗಕ್ಕೆ ಸೇರಿದ ಸದಸ್ಯರುಗಳನ್ನು ಮಾತ್ರ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಅದಾಗ್ಯೂ ಇತರೆ ಅಲ್ಪ ಸಂಖ್ಯಾತರ ಜನಾಂಗಕ್ಕೆ ಸೇರಿದ ಸದಸ್ಯರುಗಳನ್ನು ಆಯೋಗದ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಅನುಬಂಧ - 1

PROCEEDINGS OF THE GOVERNMENT OF KARNATAKA

Sub :- Setting up of "State Minorities commission" - Issue of Order-reg.

Preamble:

A Proposal to set up a State Miniorities Commission for Karnataka was under active consideration of Government for sometime past. In order to preserve secular traditions and to promote national; intergration and to undertake effective enforccement and implementation of all the safeguards provided for the Minorities in the Consititution and in Central and State Laws and also to evolve State Policies and schemes in this regard, and further with a view to safeguard the interests of the Minorities, Government have decided to constitute a "State Minorities Commission."

Order No. DPAR 1 LMR 83, Bangalore, dated 9th May 1983

Accordingly, Government are pleased to set up the State Minorities Commission to safeguard the interests of the Minorities. The Commission shall consist of a Chairman and Members as indicated below :-

1. Shri R.H. Goodwala, Advocate, Hubli	Chairman
2. Sri James Sequera, Advocate, "Lakshmi", Lalbaugh Road, Bangalore.	Member
3. Prof. Basheer Hussain, No.10, 3rd Cross, 1st Block, Jayanagar, Bangalore-560 011.	Member

4. Sri N.G. Desai, Advocate, Navalgund, Dharwad District.	Member
5. Sri D.A. Katti, Ex-M.P., Belgaum	Member
6. Sri Basheerudhin, Advocate, Raichur	Member
7. Deputy Secretary to Government, DP and AR (L&RM), Vidhana Soudha, Bangalore.	Secretary

The term of office of the Commission shall be for a period of three (3) years in the first instance. The Headquarters of the Commission, shall be at Bangalore.

The Commission will devise its own procedure in the discharge of its functions. All the Departments of the Government will furnish the information and documents and provide such assistance as may be required by the Commission from time to time.

The term of reference of the said commission shall be as indicated in the Annexure appended to this order.

By Order and in the name of the Governor of Karnataka,

ಪ್ರತಿ :-

B. JANAKIRAMAN,
Deputy Secretary to Government,
Dept. of personnel & Admnv. Reforms.
(Linguistic and Religious Minorities).

(ಕೆ. ಅಬ್ದುಲ್ ಅಹದ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಅಸುಇ (ಭಾ.ಮ.ಅ.ಸಂ. ವರ್ಗಗಳು)

To

The Compiler, Karnataka Gazette, for information with a request to publish in the next issue (both in English and Kannada version) and supply 500 copies to this Department.

The Chairman and Members concerned.

All the Commissioners and Secretaries to Government.

All Heads of Departments.

All Divisional Commissioners.

All Deputy Commissioners.

The Accountant General, Karnataka, Bangalore.

The Press Table.

The S.G.F.

ANNEXURE

TERMS OF REFERENCE

1. To evaluate the working of the various safeguards provided in the Constitution for the protection of Miniorities and in the Laws passed by the Legislature;

2. To make recommendations with a view to ensuring effective implementation and enforcement of all the safeguards;

3. To undertake a review of the implementation of the policies and schemes of this Government with respect to Minorities;

4. To conduct studies, researcha and analysis and the question of avoidance of discrimination against Minorities;

5. To suggest appropriate and legal and welfare measures in respect of any minority to be undertaken by the State Government;

6. To study any other matter which is in the opinion of the Commission, important from the point of view of the welfare and development of the Minorities, and makre appropriate recomendations;

7. To make periodical reports at prescribed intervals to the State Government.

(ಕೆ. ಅಬ್ದುಲ್ ಅಹದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತರ ವರ್ಗಗಳು)

ಅನುಬಂಧ -2

ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗ ಅಧಿನಿಯಮ 1994 ರ ಅಯ್ದು ಭಾಗ.

10. ಆಯೋಗದ ಪ್ರಕಾರ್ಯಗಳು :- (1) ಆಯೋಗದ ಪ್ರಕಾರ್ಯಗಳು ಈ ಮುಂದಿನಂತಿರತಕ್ಕದು.

(ಎ) ಸಂವಿಧಾನದಲ್ಲಿ ಮತ್ತು ಅಲ್ಪಸಂಖ್ಯಾತ ವರ್ಗಗಳ ಸಂರಕ್ಷಣೆಗಾಗಿ ರಾಜ್ಯ ವಿಧಾನ ಮಂಡಲವು ಅಂಗೀಕರಿಸಿದ ಕಾನೂನುಗಳಲ್ಲಿ ಕಲ್ಪಿಸಲಾಗಿರುವ ವಿವಿಧ ರಕ್ಷಣಾ ಕ್ರಮಗಳ ಬಗ್ಗೆ ಕಾರ್ಯನಿರ್ವಹಣೆಯನ್ನು ಪರಿಶೀಲಿಸುವುದು.

(ಬಿ) ಎಲ್ಲಾ ರಕ್ಷಣಾ ಕ್ರಮಗಳ ಪರಿಣಾಮಕಾರಿಯಾದ ಅನುಷ್ಠಾನ ಮತ್ತು ಜಾರಿಗೊಳಿಸುವಿಕೆಯನ್ನು ಖಚಿತ ಪಡಿಸಿಕೊಳ್ಳುವ ದೃಷ್ಟಿಯಿಂದ ಶಿಫಾರಸ್ಸು ಮಾಡುವುದು.

(ಸಿ) ಸಂವಿಧಾನದಲ್ಲಿ, ರಾಜ್ಯ ವಿಧಾನ ಮಂಡಲವು ಅಧಿನಿಯಮಿಸಿದ ಕಾನೂನುಗಳಲ್ಲಿ ಮತ್ತು ಅಲ್ಪ ಸಂಖ್ಯಾತ ವರ್ಗಗಳಿಗಾಗಿ ಸರ್ಕಾರದ ಕಾರ್ಯನೀತಿಗಳು ಮತ್ತು ಯೋಜನೆಗಳಲ್ಲಿ ಕಲ್ಪಿಸಲಾದ ರಕ್ಷಣಾ ಕ್ರಮಗಳ ಬಗೆಗಿನ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವುದು.

(ಡಿ) ಅಲ್ಪಸಂಖ್ಯಾತ ವರ್ಗಗಳ ಬಗೆಗಿನ ತಾರತಮ್ಯವನ್ನು ತಪ್ಪಿಸುವ ಪ್ರಶ್ನೆಯ ಸಂಬಂಧದಲ್ಲಿ ಅಧ್ಯಯನ, ಸಂಶೋಧನೆ ಮತ್ತು ವಿಶ್ಲೇಷಣೆ ಮಾಡುವುದು.

(ಇ) ಸರ್ಕಾರದ ಉದ್ದಿಮೆಗಳ ಸರ್ಕಾರದ ಮತ್ತು ಅರೆ ಸರ್ಕಾರಿ ನಿಕಾಯ ಮುಂತಾದವುಗಳ ಸೇವೆಯಲ್ಲಿ ಅಲ್ಪಸಂಖಾಯತರ ವರ್ಗಗಳ ಪ್ರಾತಿನಿಧ್ಯವನ್ನು ವಾಸ್ತವಿಕವಾಗಿ ನಿರ್ಧರಿಸುವುದು ಮತ್ತು ಪ್ರಾತಿನಿಧ್ಯವು ಸಾಕಷ್ಟಲ್ಲದಿದ್ದ ಸಂದರ್ಭದಲ್ಲಿ, ಅಪೇಕ್ಷಿತ ಮಟ್ಟವನ್ನು ಸಾಧಿಸುವುದಕ್ಕಾಗಿ ಮಾರ್ಗೋಪಾಯಗಳನ್ನು ಸೂಚಿಸುವುದು.

(ಎಫ್) ರಾಜ್ಯದಲ್ಲಿ ಕೋಮು ಸಾಮರಸ್ಯವನ್ನು ಖಚಿತಪಡಿಸಿಕೊಳ್ಳಲು, ನಿರ್ವಹಿಸಲು ಮತ್ತು ಉತ್ತೇಜಿಸಲು ಶಿಫಾರಸ್ಸುಗಳನ್ನು ಮಾಡುವುದು.

(ಜಿ) ಗೊತ್ತು ಪಡಿಸಿದ ಅವಧಿಯಲ್ಲಿ ಸರ್ಕಾರಕ್ಕೆ ನಿಯತಕಾಲಿಕ ವರದಿಗಳನ್ನು ಸಲ್ಲಿಸುವುದು.

(ಹೆಚ್) ಅಲ್ಪಸಂಖ್ಯಾತ ವರ್ಗಗಳ ಕಲ್ಯಾಣ ಮತ್ತು ಅಭಿವೃದ್ಧಿಯ ದೃಷ್ಟಿಯಿಂದ ಮುಖ್ಯವಾದುದೆಂದು ಆಯೋಗವು ಅಭಿಪ್ರಾಯ ಪಡುವ ಯಾವುದೇ ಇತರ ವಿಷಯದ ಬಗ್ಗೆ ಅಧ್ಯಯನ ನಡೆಸು ವುದು ಮತ್ತು ಸೂಕ್ತ ಶಿಫಾರಸುಗಳನ್ನು ಮಾಡುವುದು.

(ಐ) ಅಲ್ಪಸಂಖ್ಯಾತ ವರ್ಗಗಳ ಕುಂದುಕೊರತೆಗಳನ್ನು ಪರಿಗಣಿಸುವುದು ಮತ್ತು ಕಾಲಕಾಲಕ್ಕೆ ಸೂಕ್ತ ಪರಿಹಾರವನ್ನು ಸೂಚಿಸುವುದು.

(ಜೆ) ಅಲ್ಪಸಂಖ್ಯಾತ ಹಕ್ಕುಗಳ ಮತ್ತು ರಕ್ಷಣಾ ಕ್ರಮಗಳ ಬಗೆಗಿನ ವಂಚನೆಗೆ ಸಂಬಂಧಿಸಿದ ನಿರ್ದಿಷ್ಟ ದೂರುಗಳ ಬಗ್ಗೆ ಪರಿಶೀಲಿಸುವುದು ಮತ್ತು ಅಂಥ ವಿಷಯಗಳನ್ನು ಸೂಕ್ತ ಪ್ರಾಧಿಕಾರದ ಮುಂದೆ ತರುವುದು.

ಪರಂತು, (1)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯವನ್ನು ಅಲ್ಪಸಂಖ್ಯಾತ ವರ್ಗಗಳಿಗಾಗಿ ರಾಷ್ಟ್ರೀಯ ಆಯೋಗ ಅಧಿನಿಯಮ, 1992ರ (1992 ರ ಕೇಂದ್ರಾಧಿನಿಯಮ 19) 3ನೇ ಪ್ರಕರಣದ ಅಡಿಯಲ್ಲಿ ರಚಿತವಾದ ಅಲ್ಪಸಂಖಾಯತ ವರ್ಗಗಳಿಗಾಗಿ ರಾಷ್ಟ್ರೀಯ ಆಯೋಗವು ವಹಿಸಿಕೊಂಡರೆ, ರಾಜ್ಯ ಅಲ್ಪಸಂಖ್ಯಾತರ ಆಯೋಗವು ಅಂಥ ವಿಷಯಗಳ ಬಗ್ಗೆ ಅಧಿಕಾರ ವ್ಯಾಪ್ತಿ ಹೊಂದಿರುವುದು ನಿಂತು ಹೋಗತಕ್ಕುದು.

(2) ಸರ್ಕಾರವು ಆಯೋಗದ ಶಿಫಾರಸ್ಸುಗಳನ್ನು, ಶಿಫಾರಸ್ಸುಗಳ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಕ್ರಮದ ಬಗೆಗಿನ ವಿವರಣೆ ಮತ್ತು ಅಂಥ ಯಾವುದೇ ಕ್ರಮಗಳನ್ನು ಒಪ್ಪಿಕೊಳ್ಳದಿರುವ ಬಗೆಗಿನ ಕಾರಣಗಳ ಸಹಿತವಾಗಿ, ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದು.

11. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮಕ್ಕೆ ರಕ್ಷಣೆ :-

ಆಯೋಗದ ಮೂಲಕ ಅಥವಾ ಅದರ ಅಧಿಕಾರದ ಅಡಿಯಲ್ಲಿ ಅಥವಾ ಯಾವುದೇ ವರದಿ, ದಸ್ತಾವೇಜು ಅಥವಾ ಆಯೋಗದ ನಡವಳಿಯ ಮೂಲಕ, ಈ ಅಧಿನಿಯಮಕ್ಕನುಸಾರವಾಗಿ ಸದ್ಭಾವನೆಯಲ್ಲಿ ಮಾಡಲಾದ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದರ ವಿಷಯದಲ್ಲಿಯೂ, ಆಯೋಗದ ಅಥವಾ ಅಧ್ಯಕ್ಷ ಅಥವಾ ಅದರ ಯಾವೊಬ್ಬ ಸದಸ್ಯ ಅಥವಾ ಆಯೋಗದ ನಿರ್ದೇಶನದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಯಾವನೇ ವ್ಯಕ್ತಿಯ ವಿರುದ್ದವಾಗಿ ಯಾವುದೇ ದಾವೆ, ಪ್ರಾಸಿಕ್ಯೂಷನ್ನು ಅಥವಾ ಇತರ ಕಾನೂನು ವ್ಯವಹರಣೆ ಹೂಡತಕ್ಕುದ್ದಲ್ಲ.

: : ಪ್ರತಿ : :

(ಕೆ. ಅಬ್ದುಲ್ ಅಹದ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಭಾಷಾ ಮತ್ತು ಮತೀಯ ಅಲ್ಪಸಂಖ್ಯಾತರ ವರ್ಗಗಳು)

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಯವರು ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದಾರೆ. ಇದರಲ್ಲಿ ಪ್ರಮುಖವಾಗಿ ದಿನಾಂಕ 3- 10- 1994ರಲ್ಲಿ ಅಲ್ಪಸಂಖ್ಯಾತರ ಆಯೋಗಕ್ಕೆ ಅದರ ಕಾರ್ಯಸೂಚಿಯಲ್ಲಿ ಸಮಸ್ಯೆಗಳು ಆಗಿವೆಯೇನೋ ಎನ್ನುವಂಥ ದೃಷ್ಟಿಯಲ್ಲಿ ತಾವು ಹೇಳಿದ ರೀತಿಯಲ್ಲಿಯೇ 'ಡಿ'ನಲ್ಲಿ ಅಲ್ಪಸಂಖ್ಯಾತ ವರ್ಗಗಳ ಮಧ್ಯೆದಲ್ಲಿಯೇ ತಾರತಮ್ಯವಾಗುತ್ತಿರುವ ವಿಚಾರವನ್ನು ಸರಿಮಾಡುವ ದೃಷ್ಟಿಯಿಂದ ತಾವು ಕಾನೂನನ್ನು ತಂದಿದ್ದೀರಿ. ಆದರೆ ತಾವು ಕೊಟ್ಟಿರುವ ಉತ್ತರದಂತೆ, ಇದುವರೆಗೆ ಅಲ್ಪಸಂಖ್ಯಾತರ ಆಯೋಗಕ್ಕೆ ಹತ್ತು ಜನರು ಅಧ್ಯಕ್ಷರಾದರೂ ಕೂಡ ಅವರೆಲ್ಲರೂ ಒಂದೇ ಸಮಾಜದವರಾಗಿದ್ದಾರೆ. ನಿಮ್ಮ ಪ್ರಕಾರವೇ 81 ಪರ್ಸೆಂಟ್ ಇರುವ ಜನಸಂಖ್ಯೆಯ ಸಮಾಜದವರನ್ನೇ ಹತ್ತು ಬಾರಿ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಆದರೆ ಉಳಿಕೆ ಅಲ್ಪಸಂಖ್ಯಾತರನ್ನು ಮೂರು ವರ್ಷಗಳ ಅವಧಿಗಾದರೂ ಅಧ್ಯಕ್ಷರನ್ನಾಗಿ ಮಾಡಲು ಅವಕಾಶವಿತ್ತು.

ಆದರೆ ಏಕೆ ಮಾಡಲಿಲ್ಲವೆನ್ನುವುದನ್ನು ದಯವಿಟ್ಟು ಹೇಳಬೇಕು. ಇನ್ನು ಎರಡನೆಯದಾಗಿ ಇದುವರೆಗೆ ಅಲ್ಪ ಸಂಖ್ಯಾತರ ಆಯೋಗ ನೀಡಿರುವ ಹಣದಲ್ಲಿ ಶೇಕಡ 20 ಭಾಗ ಬೇರೆ ಬೇರೆ ವರ್ಗಗಳಿಗೆ ಖರ್ಚಾಬೇಕಾಗಿತ್ತು. ಆದರೆ ಕಳೆದ 17 ವರ್ಷಗಳಲ್ಲಿ ಕೂಡ ಕೇವಲ 3 ರಿಂದ 4 ಪರ್ಸೆಂಟ್‌ನಷ್ಟು ಹಣ ಮಾತ್ರ ಬೇರೆ ಬೇರೆ ವರ್ಗಕ್ಕೆ ಖರ್ಚಾಗಿದೆ. ಆದುದರಿಂದ ಈ ತಾರತಮ್ಯವನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು ಎಂಬ ಬಗ್ಗೆ ಹೇಳಬೇಕು.

ಶ್ರೀ ಎಸ್.ಎಂ.ಕೃಷ್ಣ : ಮಾನ್ಯ ಅಧ್ಯಕ್ಷರೇ ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಅಧ್ಯಯನ ಮಾಡಿ ಆ ಸಮಸ್ಯೆಗಳಿಗೆ ಪರಿಹಾರವನ್ನು ದೊರಕಿಸಿಕೊಡುವ ದೂರದೃಷ್ಟಿಯಿಂದಲೇ ಈ ಮೈನಾರಿಟಿ ಕಮೀಷನ್ 1983ರಲ್ಲಿ ಸ್ಥಾಪನೆಯಾಯಿತು. ಆನಂತರ ಇದುವರೆಗೆ ಹಲವಾರು ಅಧ್ಯಕ್ಷರುಗಳು ಬಂದುಹೋಗಿದ್ದಾರೆ. ಈಗಿರುವ ಪ್ರಶ್ನೆ, ಒಂದೇ ಸಮಾಜದವರು ಇದುವರೆಗೆ ಅಧ್ಯಕ್ಷರಾಗಿದ್ದಾರೆ ಎಂಬುದೇ ಆಗಿದೆ. ಜನಸಂಖ್ಯೆಯ ಅಂಕಿ-ಅಂಶಗಳನ್ನು ನಾವು ತೆಗೆದುಕೊಂಡು ನೋಡುವುದಾದರೆ ಯಾರು ಶೇಕಡ 80ರಷ್ಟು ಅಥವಾ ಬಹು ದೊಡ್ಡ ಪ್ರಮಾಣದಲ್ಲಿ ಅಂದರೆ ಜನಸಂಖ್ಯೆಯ 11 ಪರ್ಸೆಂಟ್ ಇದ್ದರೆ ಮಿಕ್ಕ ಅಲ್ಪ ಸಂಖ್ಯಾತ ಜನಸಂಖ್ಯೆ 1. 1 ಪರ್ಸೆಂಟ್ ಅಥವಾ 0. 1 ಪರ್ಸೆಂಟ್ ಇರುವುದರಿಂದ ಇದನ್ನು ಬ್ಯಾಲೆನ್ಸ್ ಮಾಡುವ ದೃಷ್ಟಿಯಿಂದಲೇ ಮಿಕ್ಕ ಅಲ್ಪಸಂಖ್ಯಾತರ ಸಮಾಜಗಳಿಂದ ಪ್ರತಿನಿಧಿಗಳು ಈ ಆಯೋಗದಲ್ಲಿರುತ್ತಾರೆ. ಇದರಿಂದ ಅವರಿಗೂ ಕೂಡ ಸೇಫ್‌ಗಾರ್ಡ್ ಮಾಡಿದ ಹಾಗೆ ಆಗುತ್ತದೆ. ಒಟ್ಟಾರೆ ಅಲ್ಪಸಂಖ್ಯಾತರ ಕ್ಷೇಮಾಭಿವೃದ್ಧಿಯನ್ನು ಗಮನಿಸಬೇಕಾದುದು ಅವಶ್ಯವಿದೆ. This is the rationale of the government.

ಶ್ರೀ ಎ. ರಾಮದಾಸ್ : 80 ಪರ್ಸೆಂಟ್ ಜನರಿರುವ ಸಮಾಜಕ್ಕೆ ಪ್ರಾತಿನಿಧ್ಯ ಕೊಡಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ 1994ರಲ್ಲಿ ತಾವು ಕೆಲವೊಂದು ಬದಲಾವಣೆಗಳನ್ನು ತಂದ ಉದ್ದೇಶ ಕೂಡ ಅದೇ ಆಗಿದೆ. ಉಳಿದಂಥ ಶೇಕಡ 20 ಅಲ್ಪಸಂಖ್ಯಾತರಲ್ಲೆಯೇ ಕೆಲವರು ಅಲ್ಪಸಂಖ್ಯಾತರು ಆಗಬಾರದು ಎನ್ನುವ ಉದ್ದೇಶಕ್ಕೋಸ್ಕರವಾಗಿ ಪ್ರಪೋರ್ಷನೇಟ್ ಆಧಾರದ ಮೇಲೆ ಆ ಸ್ಥಾನವನ್ನು ಕೊಡಬೇಕು. ಕಳೆದ 17 ವರ್ಷಗಳಿಂದಲೂ ಒಂದೇ ಸಮಾಜದವರು ಅಧ್ಯಕ್ಷರಾಗಿ ಬಂದಿ ರುವುದರಿಂದ 20 ಪರ್ಸೆಂಟ್ ಅಲ್ಪಸಂಖ್ಯಾತರ ಆಧಾರದ ಮೇಲೆ ಕೊನೆಯ ಪಕ್ಷ ಮೂರು ವರ್ಷ ಗಳ ಅವಧಿಗಾದರೂ ಕೂಡ ಅಲ್ಪಸಂಖ್ಯಾತರನ್ನೇ ಅಧ್ಯಕ್ಷರನ್ನಾಗಿ ಮಾಡಲು ಸರ್ಕಾರ ಪ್ರಾವಿಷನ್ ಮಾಡಬೇಕಾಗಿತ್ತಲ್ಲವೆ? ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಹಣ ಭಾಗವಾಗಿರುವುದರಲ್ಲಿಯೂ ಕೂಡ ಶೇಕಡ 96 ರಷ್ಟು ಹಣ 80 ಪರ್ಸೆಂಟ್ ಸಮಾಜದ ಕಡೆಗಾಗಿದ್ದರೆ ಉಳಿಕೆ 4 ಪರ್ಸೆಂಟ್ ಹಣ 20 ಪರ್ಸೆಂಟ್ ಅಲ್ಪ ಸಂಖ್ಯಾತರ ವರ್ಗಕ್ಕೆ ಆಗಿದೆ. ಆದುದರಿಂದ ಕನಿಷ್ಟ ಮೂರು ವರ್ಷಗಳ ಮಟ್ಟಿ ಗಾದರೂ ಕೂಡ ಅದರಲ್ಲಿರುವಂಥ ಅಲ್ಪಸಂಖ್ಯಾತರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸದಸ್ಯರ ಭಾವನೆಗಳಿಗೆ ಸ್ಪಂಧಿಸುವ ಬಗ್ಗೆ ಮಾನ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರ ಗಮನವನ್ನು so called disparities, anomalies, ಇದರ ಬಗ್ಗೆ ಸೆಳೆಯುತ್ತೇನೆ.